
ಏಪ್ರಿಲ್ ಬಂತೆಂದರೆ ಎಂಥದೋ ಸಡಗರ.. ಶಾಲೆಯ ಪಾಠ- ಪರೀಕ್ಷೆಗಳನ್ನು ಮುಗಿಸಿ ಸಂಜೆ ಮನೆ ಸೇರುವಷ್ಟರಲ್ಲೆ ಅಲ್ಲಿ ನಮ್ಮಜ್ಜ ಹಾಜರ್.

■ **ಸತೀಶ್ ಜಿ.ಕೆ. ತೀರ್ಥಹಳ್ಳಿ**



ಚಿತ್ರ: ಧನಂಜಯ ಜೀವಾಳ

ತಲುಪಲಾಗದ ಆಸ್ಪತ್ರೆ, ಸಾವು- ನೋವು ಎಲ್ಲವನ್ನೂ ಕಂಡುಂಡು ಏದುಸಿರಲ್ಲೆ ಬಾಳ ಬಂಡಿಯನ್ನೆಳೆದವರು. ಬೆಳಕು ಹರಿಯುವ ಮೊದಲು ಶುರುವಾದರೆ ತಡರಾತ್ರಿವರೆಗೂ ಮುಗೀತಿರಲಿಲ್ಲ ಅವರ ದಿನಚರಿ.

ಅಜ್ಜಿಗೆ ನಾನಂದ್ರೆ ಬಲು ಇಷ್ಟ. ಆಕೆಯ ಭಾವ ಕೋಶದಲ್ಲಿ ನಾನು ಯಾವಾಗಲೂ ಬಂಧಿ. ಅಕ್ಕರೆಯಿಂದ ಕೈತುತ್ತು ನೀಡುವಾಗ, ಮಾತಾಡುವಾಗೆಲ್ಲಾ ಆಕೆಯ ಕಣ್ಣಲ್ಲಿ ನೀರು ಜಿನುಗುತಿತ್ತು. ಅಥವಾ ಪಸೆ ಒಸರುವ ನನ್ನ ಕಣ್ಣಳಿಗೆ ಹಾಗನಿಸುತಿತ್ತೇನೊ.. ಕೈಗಾಡಿ ಎಳೆವ ಎಳೆಯ ಗಡಿಬಿಡಿ ಗೆಳೆಯರು, ಹಕ್ಕಲಿನ ಏರಿಯಲ್ಲಿ ಅಡಿಕೆಹಾಳೆ ಮೇಲೆ ಕೂತು ಜಾರುವ ಮೋಜು, ಊಟ ಮರೆತು ಗೇರು-ಮಾವಿನ ಮರವೇರಿ ಹಣ್ಣು ತಿನ್ನುವ ಸೊಗಸು, ಆತುರದಲ್ಲಿ ಗುಳುಗುಳು ತಿಂದ ಬಿಳುವ ಹಲಸು ಎಲ್ಲವೂ ಕಣ್ಣಲ್ಲಿವೆ. ಬಯಲಲ್ಲಿ ಚಿಟ್ಟೆ-ಹಾತಿಗಳ ಬೆನ್ನು ಹತ್ತಿದ್ದು, ಗುಬ್ಬಚ್ಚಿಗೊಂದು ಗೂಡು ಕಟ್ಟಿದ್ದು, ಬೀಜ ಮೊಳೆಯುವುದನ್ನು ಕುತೂಹಲದಿಂದ ಕಾದಿದ್ದು, ಕರುವನ್ನು ಹಿತ್ತಲೆಲ್ಲಾ ಓಡಿಸಿ ಹಿಡಿದು ವೀರರಂತೆ ಓಡಾಡಿದ್ದು, ಮರದ ಪತಾಸಿನಲ್ಲಿದ್ದ ಬೆಣ್ಣೆ ಉಂಡೆಗಳನ್ನು ಅತ್ತೆಯರ ಕಣ್ತಪ್ಪಿಸಿ ತಂದು ತಿಂದಿದ್ದೆಲ್ಲವೂ ಮಾಸದಂತೆ ಅಚ್ಚೊತ್ತಿವೆ. 'ಊದಿನ ಕಡ್ಡಿ' ಮಾಡುತ್ತಾ ಸಂಜೆ ಕಳೆಯುತಿದ್ದ ಅತ್ತೆ-ಮಾವ, ಅಕ್ಕಂದಿರ ಬಾಯ್ತುಂಬ ನೀತಿಕಥೆಗಳು.. ನೆನಪಿದೆ, ಅವತ್ತೊಂದಿನ ಅಂಗಳದಲ್ಲಿ ಬುಟ್ಟಿ ನೇಯುತ್ತಿದ್ದ ಅಜ್ಜನ ಮೈಮೇಲೆ ಹಾಲು ಚೆಲ್ಲಿತ್ತು ಬೆಳದಿಂಗಳು, ತಲೆಮೇಲೆ ರಾಶಿ ನಕ್ಷತ್ರ.. ಆಚೆ ದಡದಿಂದ ದೊಂದಿ ಹಿಡಿದು ಬಾಳೆ ತೋಟದಲ್ಲಿದ್ದ ಹಿಂಡಾನೆಗಳನ್ನು ಬೆದರಿಸಿ ಬರುತ್ತಿದ್ದ ಊರ ಜನರೆದುರು ಕೇಕೆಹಾಕಿ ಕುಣಿದು ಕುಪ್ಪಳಿಸಿದ್ದು ನಮ್ಮ ತಂಡ. ಆಗೆಲ್ಲ ನಮಗೇನಿದ್ದರೂ ತಿಂಗಳಿಡೀ ಆ ಪರಿಸರದಲ್ಲಿ ಸುಮ್ಮನೆ ಕಳೆದು ಹೋಗೋ ಖುಷಿ.. ಗದ್ದೆಯಲ್ಲಿ ಅಜ್ಜ ಪ್ರೀತಿಯಿಂದ ಹೇಳಿಕೊಟ್ಟ ಸಹಜಕೃಷಿ ಬಿತ್ತಿ ಬೆಳೆಯುವ ಪಾಠ. ಸೌದೆ ಸೊಪ್ಪಿಗೆ ಜೋಡೆತ್ತಿನ ಗಾಡಿಯಲ್ಲಿ ಮಾಡಿದ ಕಾಡು ಸಂಚಾರಗಳೆಲ್ಲ ಎಲ್ಲೂ ಮಾಸಿಲ್ಲ. ನೀನೆ ಓಡ್ಸು ಅಂತ ಮಾವ ಅವತ್ತು ನನ್ನನ್ನ ನೊಗದ ಮೇಲೆ ಕೂರಿಸಿದಾಗಂತೂ ದಿನವಿಡೀ ರೋಮಾಂಚನ..!

ಹಬ್ಬ-ಹರಕೆಗೆ, ದೂರವಿರುವ ಕುಟುಂಬದ ಕುಡಿಗಳೆಲ್ಲ ಮನೆ ಸೇರುತ್ತಿದ್ದರೆ ಅಲ್ಲಿ ನೈಜ ಬಾಂಧವ್ಯದ ಅನಾವರಣ. ದಿನಪೂರ್ತಿ ಮಾತು-ಹರಟೆ, ತರಲೆ-ತಮಾಷೆ. ಇಡೀ ವರ್ಷದ ಸಂಕಷ್ಟಗಳಿಗೆಲ್ಲ ಅವತ್ತು ಅಲ್ಪವಿರಾಮ. ಅಲ್ಲಿ ಭಾರವೆಲ್ಲವೂ ಹಗುರಾಗುತ್ತಿದ್ದವು ಭಾವವೂ ಕೂಡ. ಅದೊಂದು ಮೂರು ತಲೆಮಾರುಗಳ ಮಹಾಸಮ್ಮಿಲನ-ಭಾವ ಸಂಗಮ..

ನಾವೆಲ್ಲಾ ರಜೆ ಮುಗಿಸಿ ಹೊರಡಬೇಕಾದಾಗಂತೂ, ದು:ಖ ಮಡುಗಟ್ಟಿ ಮುಂಚಿನ ರಾತ್ರಿ ಮತ್ತೆ ಜಾಗರಣೆ. ಅಂತೂ ಹೊರಟು, ಗಾಡಿಹಾದಿಗೆ ಹೊರಳಿ ಕಣ್ತುಂಬಿಕೊಂಡು ಭಾರವಾದ ಹೆಜ್ಜೆ ಹಾಕುತ್ತಿದ್ದರೆ ಆಕಡೆ ಅಜ್ಜಿ ನಮ್ಮ ಕಾಲು ಕಟ್ಟುತ್ತ, ಅಪ್ಪಿ ಮುದ್ದಾಡಿ ಗೋಳಾಡುತ್ತಿದ್ದರು, ಬೆನ್ನು ಬಿಡದೆ ಹಿಂಬಾಲಿಸುತ್ತ ಕಣ್ಣೀರಾಗುತ್ತಿದ್ದರು. ದೂರ ತಿರುವಿನಲ್ಲಿ ತಿಟ್ಟತ್ತಿ ತಿರುಗಿ ಮರೆಯಾಗುವವರೆಗೂ ಬೆನ್ನ ಹಿಂದಿಂದೆ ಬರುತ್ತಿದ್ದರು.

ಅಷ್ಟಕ್ಕೂ, ಬದುಕಿರುವವರೆಗೂ ಪ್ರತಿಕ್ಷಣಗಳನ್ನು ಕಷ್ಟದಲ್ಲೇ ಕಳೆದ ಅಜ್ಜ-ಅಜ್ಜಿ ಬಿಟ್ಟು ಹೋಗಿದ್ದು ಕೇವಲ ಕುಲ-ನೆಲವನ್ನಲ್ಲ, ಶ್ರಮಸಂಸ್ಕೃತಿಯ ಅಪಾರ ಕಸುವನ್ನು, ಅಗಾಧ ಸಾಧ್ಯತೆಗಳನ್ನು. ಈಗಲ್ಲಿ ನಳನಳಿಸುವ ಹಸಿರೆಲ್ಲ ಆ ಹಿರಿಯರ ಹೆಸರ ಹೇಳ್ತಿವೆ. ನಂಬಿದ ನೆಲವೀಗ ಅನ್ನ ನೀಡ್ತಿದೆ. ಮನೆ ಮೂರಾದರೂ ಮುಗ್ಧತೆ, ಪ್ರೀತಿ, ಸಹಜೀವನ, ಬೆಸೆದ ಬಾಂಧವ್ಯ, ನಿತ್ಯದ ಜೀವನೋತ್ಸಾಹಗಳು ಹಾಗೇ ಇವೆ. ಅಜ್ಜನೆಂಬ ಆಲದ ಮರಕ್ಕೆ ಮತ್ತಷ್ಟು ಬಿಳಲುಗಳಂಟಿದಾವೆ, ನೆರಳಿನ ಪರಿಧಿ ವಿಸ್ತರಿಸ್ತಾನೇ ಇದೆ..

ಹಾಗಂತ ಹೆಗಲತ್ತಿ ಈಗ ಮೊದಲಿನಂತಿಲ್ಲ, ಒಂದು ಮಗ್ಗುಲು ಮಗುಚಿಕೊಂಡಿದೆ. ಹಳ್ಳ-ಕೊಳ್ಳಗಳಲ್ಲಿ ಸಾಕಷ್ಟು ನೀರು ಹರಿದಿದೆ. ಸುತ್ತ ಆವರಿಸಿದ್ದ ಕಾಡಿನ ಕವಚವೆಲ್ಲ ಕಳಚಿ ಬಿದ್ದಿದೆ. ನೇಗಿಲು-ನೊಗ ಅಟ್ಟಹತ್ತಿವೆ. ಜಗುಲಿಯಲ್ಲಿ ಆಧುನಿಕ ಯಂತ್ರಗಳು ಬಂದು ಕೂತಿವೆ..ಬಡತನವಿದ್ದರೂ ಹಸಿವು ಮಾಯವಾಗಿದೆ. ಗಾಡಿಹಾದಿಯೀಗ ಡಾಂಬರು ಕಂಡಿದೆ, ದಿನಕ್ಕೊಂದು ಬಾರಿ ಬಸ್ಸು ಬಂದುಹೋಗುತ್ತಿದೆ. ಎಲ್ಲೆಲ್ಲೂ ಈಗ ಜನ-ಮನೆ, ಗದ್ದೆ ತೋಟ, ಜೊತೆಗೆ ಸಾಲು ಸಾಲು ಬಯಲು..

ಅನ್ನಿಸ್ತಿದೆ, ಹತ್ತಾರು ವರ್ಷ ನಾಲ್ಕಾರು ಡಿಗ್ರಿಗಳಿಗಂತ ವಿವಿಧ ವಿಶ್ವವಿದ್ಯಾನಿಲಯಗಳನ್ನು ಹೊಕ್ಕು ಬಂದ ಮೇಲೂ, ಹೊಟ್ಟೆಪಾಡಿಗಾಗಿ ನಾಡಿನೆಲ್ಲಡೆ ಊರೂರು ಅಲೆದ ನಂತರವೂ ಬಾಲ್ಯದ ಆ ಕ್ಷಣಗಳು ಕಟ್ಟಿಕೊಟ್ಟ ನೀತಿಪಾಠಗಳನ್ನು ಜೀವನಪ್ರೀತಿಯನ್ನು ಮತ್ತೆಲ್ಲೂ ಕಲಿಯಲು ಸಾಧ್ಯವಾಗಿಲ್ಲ. ಯೋಚಿಸ್ತೇನೆ, ನನ್ನೆರಡು ಅರಳುಗಣ್ಣುಗಳ ಪುಟಾಣಿಗಳಿಗೆ ಈಗ ಅಂತದ್ದೊಂದು ಅನುಭವವನ್ನು ದಾಟಿಸೋದು ಸಾಧ್ಯವಾ..? ●